## ಐ.ಸಿ.ಎ.ಆರ್ - ಕೇಂದ್ರೀಯ ಒಳನಾಡು ಮೀನುಗಾರಿಕೆ ಸಂಶೋಧನಾ ಸಂಸ್ಥೆ,

## ಬ್ಯಾರಕ್ಪೋರ್, ಕೋಲ್ಕತ - 700120

### ಕೋವಿಡ್–19 ಸಂಧರ್ಭದಲ್ಲಿ ಜಲಾಶಯ ಹಾಗೂ ವೆಟ್‌ಲ್ಯಾಂಡ್ ಮೀನುಗಾರಿಕೆ ಚಟುವಟಿಕೆಗೆ –ಸಲಹೆಗಳು

ಮೀನುಗಾರರು, ಮೀನುಗಾರಿಕೆಗೆ ಹಾಗೂ ಮೀನುಗಾರಿಕಾ ಚಟುವಟಿಕೆಗಳಿಗೆ ಸಣ್ಣ ಗುಂಪುಗಳಾಗಿ ತೆರಳಬೇಕು ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸಿ ಆಗಾಗ್ಗೆ ಕೈಗಳನ್ನು ಸಾಬೂನಿನಿಂದ ಸ್ವಚ್ಚಗೊಳಿಸಿ ನಂತರ ಸ್ಯಾನಿಟೈಸರ್ ಬಳಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಮೀನು ನಿರ್ವಹಣೆ ಹಾಗೂ ಮೀನುಪ್ಯಾಕ್ ಮಾಡುವಾಗ ಕೈಗವಸುಗಳನ್ನು ಕಡ್ಡಾಯವಾಗಿ ಉಪಯೋಗಿಸಬೇಕು. ಕೋವಿಡ್–19 ಹರಡುವುದನ್ನು ತಪ್ಪಿಸಲು ಆರೋಗ್ಯವಂತ ಮೀನುಗಾರರು ಮಾತ್ರ ಮೀನುಗಾರಿಕಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು.




- ಅರೆಕಾಲಿಕ ಕೆರೆಗಳ ಹಾಗೂ ಫ್ಲಡ್‌ಪ್ಲೇನ್ ವೆಟ್‌ಲ್ಯಾಂಡ್‌ಗಳಲ್ಲಿ ಕನಿಷ್ಠ ಮೀನುಗಾರರನ್ನು ಬಳಸಿಕೊಂಡು ಹಂತಹಂತವಾಗಿ ಮೀನುಹಿಡಿಯುವುದು.
- ಜಲಸಂಪನ್ಮುಲದ ಅಂಚಿನಲ್ಲಿ ವಾಸಿಸುವ ಮೀನುಗಾರರು ವೈಯಕ್ತಿಕವಾಗಿ ಬಿಡುಬಲೆ, ಬೀಸುಬಲೆ ಹಾಗೂ ಮೀನುಕೂಳಿಗಳನ್ನು ಬಳಸಿ ಮೀನುಗಾರಿಕೆ ಮಾಡಬಹುದು

ಪೂರ್ಣಕಾಲಿಕ ಜಲಾಶಯಗಳಲ್ಲಿ ಸಮುದಾಯ ಮೀನು ಹಿಡುವಳಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕು ಹಾಗೂ ಸಣ್ಣ ಹಿಡುವಳಿದಾರರು ತೆಪ್ಪಗಳಲ್ಲಿ ಒಬ್ಬರು ಅಥವಾ ಇಬ್ಬರು ತೆರಳಿ ಬಿಡುಬಲೆ ಬಳಸಿ ಮೀನು ಹಿಡಿಯಬಹುದು.




ಪೂರಕ ಚಟುವಟಿಕೆಗಳಾದ ಬಲೆ ಹಾಗೂ ದೋಣಿ ರಿಪೇರಿ ಮತ್ತು ವೆಟ್‌ಲ್ಯಾಂಡ್‌ಗಳಲ್ಲಿ ಅನುಪಯುಕ್ತ ಗಿಡಗಂಟೆಗಳನ್ನು ತೆರವುಗೊಳಿಸಲು ಕನಿಷ್ಠ 1 ಅಥವಾ2 ಮಿನುಗಾರರನ್ನು ಬಳಸಬೇಕು.

- ಪಂಜರ ಹಾಗೂ ದೊಡ್ಡಿಗಳಲ್ಲಿ ಮೀನುಕೃಷಿ ಮಾಡುವವರು ಒಬ್ಬರು ಅಥವಾ ಇಬ್ಬರು ಆರೋಗ್ಯವಂತ ಮೀನುಗಾರರನ್ನು ಬಳಸಿ ದೈನಂದಿನ ಆಹಾರ ನೀಡಿಕೆ ಮತ್ತು ಮೇಲುಸ್ತುವಾರಿ ಚಟುವಟಿಕೆಗಳನ್ನು ನಿರ್ವಹಿಸಲು ನೇಮಿಸುವುದು. ಪಂಜರ ಹಾಗೂ ದೊಡ್ಡಿ ಮೀನುಕೃಷಿಯಲ್ಲಿ ಪ್ರತಿದಿನ ಆಹಾರ ನೀಡಿ ಬೆಳೆನಷ್ಟ ಹಾಗೂ ಅಪೌಷ್ಠಿಕತೆಯಿಂದಾಗುವ ಮೀನುಮರಣವನ್ನು ತಪ್ಪಿಸಬಹುದು. ನಿಯಮಿತವಾಗಿ ಮೀನುಸಲಕರಣೆಗಳಾದ ಬಲೆಗಳು, ಆಹಾರ ನೀಡುವ ತಟ್ಟೆಗಳು ಮತ್ತು ಬಕೇಟ್‌ಗಳನ್ನು ಸೋಂಕುನಿವಾರಕದಿಂದ ಸ್ವಚ್ಛಗೊಳಿಸಬೇಕು.




- ಮೀನುಗಾರರ  ಸಹಕಾರ ಸಂಘಗಳು ಮತ್ತು ಮೀನುಕೃಷಿಕರು ಮೀನುಗಳಿಗೆ ಸಾಮಾನ್ಯವಾಗಿ ನೀಡುವ ಆಹಾರದ ಪ್ರಮಾಣವನ್ನು ಶೇ.50% ರಷ್ಟು ಕಡಿತಗೊಳಿಸಿ, ಹೆಚ್ಚು ಮೀನುಸಾಂದ್ರತೆಯಿರುವ ಕೊಳಗಳಲ್ಲಿ ಆಮ್ಲಜನಕ ಕೊರತೆಯನ್ನು ತಡೆಗಟ್ಟಬಹುದು ಹಾಗೂ ಆಗಾಗ್ಗೆ ಕೊಳಗಳಲ್ಲಿ ಆಮ್ಲಜನಕ ಪ್ರಮಾಣವನ್ನು ಪರೀಕ್ಷಿಸುತ್ತಿರಬೇಕು.

- ಮೀನುಮರಿ ಉತ್ಪಾದನೆ ಹಾಗೂ ಪಾಲನಾ ಕೇಂದ್ರಗಳಲ್ಲಿ ತಪ್ಪದೆ ಕೋವಿಡ್–19 ನಿಯಂತ್ರಣ ಮಾರ್ಗಸೂಚಿಗಳನ್ನು ಪಾಲಿಸಬೇಕು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಮೀನುಮರಿ ಪೋಷಣೆ ಹಾಗೂ ಪಾಲನಾಕೊಳಗಳನ್ನು ತಯಾರಿಸುವಾಗ ಸ್ವಯಂಸಂರಕ್ಷಣಾ ಕ್ರಮಗಳನ್ನು ಅನುಸರಿಸಬೇಕು.




ಪ್ರಾಥಮಿಕ ಮೀನುಗಾರಿಕಾ ಸಹಕಾರ ಸಂಘಗಳು ಮೀನುಗಾರರ ಸುರಕ್ಷತೆಯನ್ನು ಕಾಪಾಡಲು ಕ್ರಮವಹಿಸಿ, ಮಾಸ್ಕ್ ಹಾಗೂ ಸ್ಯಾನಿಟೈಸರ್‌ಗಳನ್ನು ಆಯಾ ರಾಜ್ಯ ಮೀನುಗಾರಿಕಾ ಇಲಾಖೆ / ಎನ್.ಜಿ.ಒ ಗಳ ಸಹಕಾರದಿಂದ ಒದಗಿಸಬೇಕು.

ಮೀನು ಇಳಿದಾಣ ಕೇಂದ್ರಗಳಲ್ಲಿ ಹೆಚ್ಚು ಜನಸಂದಣಿಯನ್ನು ತಪ್ಪಿಸಿ, ಮೀನುಗಳನ್ನು ಸ್ಥಳೀಯವಾಗಿ ಮಾರಾಟ ಮಾಡಲು ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಹಿಡುವಳಿಯಾದ ಮೀನನ್ನು ಸಣ್ಣ ಸಣ್ಣ ಮೀನುಗಾರರ ಗುಂಪುಗಳು ಸಂಗ್ರಹಿಸಿ, 3–4 ನಿಯೋಜಿತರಿಗೆ ಮೀನುಮಾರುಕಟ್ಟೆಗೆ ಸಾಗಿಸಲು ಹಸ್ತಾಂತರ ಮಡಬೇಕು. ರಾಜ್ಯ ಮೀನುಗಾರಿಕೆ ಇಲಾಖೆಗಳು ಮಂಜುಗೆಡ್ಡೆ ಲಭ್ಯತೆಯನ್ನು ಖಚಿತಪಡಿಸಬೇಕು ಮತ್ತು ಮೀನುಮಾರಾಟ ಮಾಡಲು ಅವಶ್ಯಕತೆಗಳನ್ನು ಪೂರೈಸಬೇಕು.

ಬಲೆಗಳು, ಕೂಳಿಗಳು, ದೋಣಿಗಳು ಹಾಗೂ ಇತರೆ ಸಾಮಗ್ರಿಗಳನ್ನು ಪ್ರತೀ ಮೀನುಗಾರಿಕೆ ಚಟುವಟಿಕೆ ನಂತರ ಸ್ಯಾನಿಟೈಸ್ ಮಾಡಬೇಕು ಹಾಗೂ ಸಂಪರ್ಕದಿಂದ ರೋಗ ಹರಡುವಿಕೆಯನ್ನು ತಪ್ಪಿಸಲು ಆರೋಗ್ಯವಂತ ಮೀನುಗಾರ ತನ್ನದೇ ಸಾಮಗ್ರಿಗಳನ್ನು ಬಳಸಬೇಕು.




ಮೀನುಕೃಷಿಗೆ ಬೇಕಾಗುವ ಆಹಾರ, ರಸಗೊಬ್ಬರಗಳು, ಆಮ್ಲಜನಕ ಗುಳಿಗೆಗಳು ಮತ್ತು ಜಿಯೋಲೈಟ್ ಗಳನ್ನು ಖರೀದಿಸುವಾಗ ಹಾಗೂ ಮೀನುಮಾರಾಟ ಮಾಡುವಾಗ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹೊರಡಿಸಿರುವ ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು ತಪ್ಪದೇ ಕಡ್ಡಾಯವಾಗಿ ಪಾಲಿಸಬೇಕು.